# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ವಿಆ(ಘ.ತ್ಯಾ.ನಿ)/ಪಿಆರ್/ 64 /2016–17

ವಿಶೇಷ ಆಯುಕ್ತರು (ಘ.ತ್ಯಾ.ನಿ/ಆ)ರವರ ಕಛೇರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು, ದಿನಾಂಕ:10.06.2016

## :: ಕಛೇರಿ ಆದೇಶ ::

ವಿಷಯಃ ಪಾಲಿಕೆಯ ವ್ಯಾಪ್ತಿಯಲ್ಲಿ ಪೌರ ಕಾರ್ಮಿಕರುಗಳಿಗೆ, ಶುಚಿಮಿತ್ರ, ಸಂಘ ಸಂಸ್ಥೆ ಮತ್ತು ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳಿಗೆ (PKs, Suchimithra, NGO's & RWA) ಘನತ್ಯಾಜ್ಯ ನಿರ್ವಹಣೆ ಬಗ್ಗೆ ತರಬೇತಿ ನೀಡುವ ಕುರಿತು.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಕೆ ವ್ಯಾಪ್ತಿಯ ವಾರ್ಡ್ ಮಟ್ಟದಲ್ಲಿ ಖಾಯಂ ಹಾಗೂ ಗುತ್ತಿಗೆ ಪೌರ ಕಾರ್ಮಿಕರಿಗೆ, ಶುಚಿಮಿತ್ರ, ಸಂಘ ಸಂಸ್ಥೆ ಮತ್ತು ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳಿಗೆ (PKs, Suchimithra, NGO's & RWA) ಮಾನವ ಸಂಪನ್ಮೂಲ ವ್ಯಕ್ತಿಗಳ ಮೂಲಕ ತರಬೇತಿ ನೀಡಲು ದಿನಾಂಕ:17.06.2016 ರಿಂದ ಪ್ರಾರಂಭಿಸಲು ಯೋಜನೆ ರೂಪಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಕೆಳಗೆ ಸೂಚಿಸಿರುವ ಅಂಶಗಳಂತೆ ಜರೂರಾಗಿ ಕ್ರಮವಹಿಸಲು ಸೂಚಿಸಿದೆ.

- Preparatory ಸಭೆಯನ್ನು ದಿ:16.06.2016 ರೊಳಗೆ ಮುಕ್ತಾಯಗೊಳಿಸಲು ಸೂಚಿಸುತ್ತಾ, ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ತರಬೇತಿ ದಿನಾಂಕ, ಸ್ಥಳ ಮತ್ತು ಮಾಸ್ಟರ್ ತರಬೇತಿದಾರರನ್ನು Session ಗಳಿಗೆ ನಿಯೋಜಿಸಿಕೊಂಡು ನಮೂನೆಯನ್ನು ಭರ್ತಿ ಮಾಡಿ ದಿನಾಂಕ:16.06.2016 ರೊಳಗೆ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ.
- ಜನ ಪ್ರತಿನಿಧಿಗಳ ಅಧ್ಯಕ್ಷತೆಯಲ್ಲಿ ಒಂದು ದಿನಕ್ಕೆ ಒಂದು ತಂಡದಂತೆ ಸುಮಾರು 40 ರಿಂದ 50 ಜನರಿಗೆ ಘನತ್ಯಾಜ್ಯ ನಿರ್ವಹಣೆ ಕುರಿತು ತರಬೇತಿ ನೀಡಬೇಕಾಗಿರುತ್ತದೆ.
- Preparatory ಸಭೆಯಲ್ಲಿ ಅಪರ/ಜಂಟಿ ಆಯುಕ್ತರು/ಅಧೀಕ್ಷಕ ಅಭಿಯಂತರರು ಮತ್ತು ಆರೋಗ್ಯಾಧಿಕಾರಿಗಳು ಉಪಸ್ಥಿತಿ ಇದ್ದು ಮಾಸ್ಟರ್ ತರಬೇತಿದಾರರನ್ನು ಅಂತಿಮಗೊಳಿಸುವುದು.
- ತರಬೇತಿ ನೀಡುವ ಸ್ಥಳ ಅಂದರೆ ವಾರ್ಡ್ ವ್ಯಾಪ್ತಿಯಲ್ಲಿ ವ್ಯವಸ್ಥಿತವಾದ ಶಾಲೆ/ಸಮುದಾಯ ಭವನ/ವಾರ್ಡ್ ಕಛೇರಿ/ಇತರೆ ಯಾವುದಾದರು ವ್ಯವಸ್ಥಿತವಾದ ಸ್ಥಳಗಳನ್ನು ತರಬೇತಿಗಾಗಿ ಆಯ್ಕೆ ಮಾಡುವುದು.
- ತರಬೇತಿಗಾಗಿ ಕುರ್ಚಿ, ಮೇಜು, ಫ್ಯಾನ್, ಲೈಟ್, ಕುಡಿಯುವ ನೀರು, ಕಾಫಿ/ಟೀ,ಬಿಸ್ಕೆಟ್ ಇತರೆ ವ್ಯವಸ್ಥೆ ಇರುವಂತೆ ನೋಡಿಕೊಳ್ಳುವುದು.

- ಪ್ರೊಜೆಕ್ಟರ್ ವ್ಯವಸ್ಥೆಯನ್ನು ಸಹ ಮಾಡಬೇಕಾಗಿರುವುದರಿಂದ ತರಬೇತಿ ನೀಡಲು ಯೋಗ್ಯವಾದ ಸ್ಥಳವನ್ನು ಆಯ್ಕೆ ಮಾಡಿಕೊಂಡು ತರಬೇತಿಯನ್ನು ಯಶಸ್ವಿಗೊಳಿಸುವುದು.
- ತರಬೇತಿ ಕಾರ್ಯಕ್ರಮವು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ, ಆರೋಗ್ಯ ವೈದ್ಯಾಧಿಕಾರಿಗಳ ಮತ್ತು ಆರೋಗ್ಯ ಪರಿವೀಕ್ಷಕರುಗಳು ಮೇಲುಸ್ತುವಾರಿಯಲ್ಲಿ ನಡೆಸುವುದು.
- ಸದರಿ ತರಬೇತಿಯನ್ನು SWMRT ತಂಡದವರು ನಡೆಸಿಕೊಡಲಿದ್ದು, ಸದರಿಯವರನ್ನು ಸಂಪರ್ಕಿಸಿ ಎಲ್ಲಾ ರೀತಿಯ ಸಹಕಾರ ನೀಡುವುದು.
- ಪ್ರತಿ Session ಗೆ ಮಾಸ್ಟರ್ ತರಬೇತಿದಾರರನ್ನು ನೇಮಕ ಮಾಡುವುದು.
- Session ದಿನಾಂಕ ಮತ್ತು ಸ್ಥಳವನ್ನು ನಿರ್ಧರಿಸುವುದು.
- ಮಾಸ್ಟರ್ ತರಬೇತಿದಾರರಿಗೆ ಗುರುತಿನ ಚೀಟಿ ನೀಡುವುದು.

ಮೇಲೆ ತಿಳಿಸಿರುವ ಎಲ್ಲಾ ಅಂಶಗಳನ್ನು ಅಂತಿಮಗೊಳಿಸಿ ದಿನಾಂಕ:16.06.2016ರೊಳಗೆ ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯನ್ನು ಭರ್ತಿ ಮಾಡಿ ಸಲ್ಲಿಸಲು ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರವರಿಗೆ ಸೂಚಿಸಿದೆ.

6.6.16

ವಿಶೇಷ ಆಯುಕ್ತರು (ಘ.ತ್ಯಾ.ನಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು</u>

1. ಪೂಜ್ಯ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರುರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3. ಉಪ ಮಹಾಪೌರರು ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ಜಂಟಿ ಆಯುಕ್ತರು (ಘ.ತ್ಯಾ.ನಿ.) ರವರಿಗೆ ಮುಂದಿನ ಕ್ರಮಕ್ಕಾಗಿ.
6. ಪ್ರಧಾನ ಅಭಿಯಂತರರು/ಮುಖ್ಯಅಭಿಯಂತರರು (ಘ.ತ್ಯಾ.ನಿ.) ರವರ ಮುಂದಿನ ಅಗತ್ಯಕ್ರಮಕ್ಕಾಗಿ.
7. ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರುಗಳಿಗೆ ಮುಂದಿನ ಅಗತ್ಯಕ್ರಮಕ್ಕಾಗಿ
8. ಎಲ್ಲಾ ವಲಯದ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಅಗತ್ಯಕ್ರಮಕ್ಕಾಗಿ
9. ಎಲ್ಲಾ ವಲಯದ ಅಧೀಕ್ಷಕ ಅಭಿಯಂತರರುಗಳಿಗೆ ಮುಂದಿನ ಅಗತ್ಯಕ್ರಮಕ್ಕಾಗಿ
10. ಕಛೇರಿ ಕಡತಕ್ಕೆ.